# ಪರಮಹಂಸರ ದಿವ್ಯವಾಣಿ



ಅದೊಂದು ಸಂಜೆ. ಕಲ್ಕತ್ತಾ ಮಹಾನಗರದ ದಕ್ಷಿಣೇಶ್ವರದಲ್ಲಿರುವ ಭವತಾರಿಣಿ ಕಾಳಿಯ ಮಂದಿರದ ಒಂದು ಮೂಲೆಯಲ್ಲಿದ್ದ ಒಂದು ಕೋಣೆಯತ್ತ ಅನೇಕ ಮಂದಿ ಭಕ್ತರು ಹೋಗುತ್ತಿದ್ದಾರೆ. ಪಕ್ಕದಲ್ಲೇ ಪ್ರಶಾಂತವಾಗಿ ಜುಳುಜುಳು ನಿನಾದಗೈಯುತ್ತಾ ಗಂಗೆ ಹರಿಯುತ್ತಿದ್ದಾಳೆ. ಕೋಣೆಯಿಂದ ಸುಮಧುರ ಧ್ವನಿಯೊಂದು ಕೇಳಿ ಬರುತ್ತಿದೆ: 'ಮಾ ತ್ವಂ ಹಿ ತಾರಾ......' ಭಕ್ತರೆಲ್ಲರೂ ಆ ಗಂಧರ್ವಗಾನವನ್ನು ಕೇಳುತ್ತ ಮೈಮರೆತಿದ್ದಾರೆ. ಶ್ರೀರಾಮಕೃಷ್ಣ ಪರಮಹಂಸರ ಬಾಯಿಯಿಂದ ನಿರರ್ಗಳವಾಗಿ ಆಧ್ಯಾತ್ಮಿಕ ವಿಚಾರಗಳು ಹೊರಹೊಮ್ಮುತ್ತಿವೆ. ಮುಂದೊಂದು ದಿನ ಅವರ ಈ ಮಾತುಗಳೇ ಜಗತ್ತಿನ ಮೂಲೆಮೂಲೆಗೂ ಹರಡಿ, ಅನೇಕರ ಬದುಕನ್ನು ರೂಪಿಸಬಲ್ಲವು ಎಂದು ಆಗ ಯಾರು ತಿಳಿದಿದ್ದರು?

ಹತ್ತೊಂಬತ್ತನೇ ಶತಮಾನದ ಕೊನೆಯ ಭಾಗದಲ್ಲಿ ತಮ್ಮ ಇಹಜೀವನಲೀಲೆಯನ್ನು ಮುಗಿಸಿದ ಶ್ರೀರಾಮಕೃಷ್ಣರು ಕೇವಲ ಆ ಕಾಲಘಟ್ಟಕ್ಕೆ ಸೀಮಿತರಾದವರಾಗಿರಲಿಲ್ಲ. ಅನೇಕ ಸಹಸ್ರ ವರ್ಷಗಳ ಸನಾತನ ಪರಂಪರೆಯೇ ಅವರಲ್ಲಿ ಮೈಗೂಡಿ ನಿಂತು ವ್ಯಕ್ತಿರೂಪವನ್ನು ತಳೆದಿತ್ತು; ಅದೇ ರೀತಿ ಮುಂದಿನ ಸಹಸ್ರಾರು ವರ್ಷಗಳವರೆಗೂ ಅವರ ಜೀವನ, ಆದರ್ಶ, ವಾಣಿ ಮನುಕುಲವನ್ನು ಮುನ್ನಡೆಸುವುವು. ಅವತಾರ ಪುರುಷರ ವಿಶೇಷತೆಯೇ ಇದು: ಪ್ರಪಂಚದ ಬಹುಭಾಗವನ್ನು ವ್ಯಾಪಿಸಿ ಅವರ ಪ್ರಭಾವ ನಿಲ್ಲಬಲ್ಲದು; ಕಾಲದ ದೃಷ್ಟಿಯಿಂದಲೂ ಸುದೀರ್ಘಾವಧಿಯಲ್ಲಿ ಅವರ ಪ್ರಭಾವ ಮಾನವನ ಹೃದಯದಲ್ಲಿ ದೃಢವಾಗಿ ನಿಲ್ಲುವುದು. ಹೀಗೆ ಕಾಲ-ದೇಶಗಳನ್ನು ವ್ಯಾಪಿಸಿ ನಿಲ್ಲುವ ತ್ರಿವಿಕ್ರಮ ಸಾಮರ್ಥ್ಯ ಅವತಾರಪುರುಷರಿಗೆ ಮಾತ್ರ ಎಂಬುದನ್ನು ಜಗತ್ತು ಕಂಡಿದೆ.

ಕಾಲ ಬದಲಾಗುತ್ತಲೇ ಇರುತ್ತದೆ. ಶ್ರೀರಾಮಕೃಷ್ಣರು ಬದುಕಿದ್ದಾಗ ಇದ್ದಂತೆ ಜಗತ್ತು ಈಗಿಲ್ಲ. ಹಲವಾರು ಆವಿಷ್ಕಾರಗಳು, ಆಧುನಿಕ ವಿದ್ಯಮಾನಗಳು ಜರುಗಿವೆ. ಆದರೆ ಇಂದಿಗೂ ಪ್ರಸ್ತುತವಾಗಬಲ್ಲ ಹಲವು ಸತ್ಯಗಳನ್ನು, ಹಲವು ನೈತಿಕ ಮಾರ್ಗಗಳನ್ನು ಶ್ರೀರಾಮಕೃಷ್ಣರಲ್ಲಿ ನಾವು ಕಾಣುತ್ತೇವೆ. ಕಾರಣ, ಅವರು ಹೇಳುವ ಮಾತುಗಳು ಕಾಲದ ಇತಿಮಿತಿಗಳನ್ನು ಮೀರಿ ನಿಂತ ಶಾಶ್ವತ ಮೌಲ್ಯಗಳಾಗಿದ್ದವು. ಎಲ್ಲ ಕಾಲಕ್ಕೂ ಸಲ್ಲುವ ಜೀವನ ಮಾರ್ಗಗಳಾಗಿದ್ದವು. ಆದರೆ ಅದನ್ನು ಅವರು ಹೇಳಿದ ರೀತಿ ತೀರ ಹೊಸದು. ಸರಳವಾದ ಮಾತುಗಳು; ಸುಂದರ ದೃಷ್ಟಾಂತಗಳು; ಒಪ್ಪುವ ಉಪಮೆಗಳು; ಹೃದಯವನ್ನರಳಿಸುವ ಮೃದು ಹಾಸ್ಯ; ಅಂತರಂಗವನ್ನೇ ಕಲಕಿ ಮಾನವನನ್ನು ದೈವತ್ವದ ನೆಲೆಗೇರಿಸಬಲ್ಲ ಸ್ಫೂರ್ತಿಯ ಕಿಡಿ; ನೊಂದವರಿಗೆ ತಾಯಿಯ ಕರುಣೆ-ಸಾಂತ್ವನ ನೀಡುವ ಅಮೃತಧಾರೆ.

ಶ್ರೀರಾಮಕೃಷ್ಣರ ಉಪದೇಶಗಳೆಲ್ಲ 'ಶ್ರೀರಾಮಕೃಷ್ಣ ವಚನವೇದ' ವೆಂಬ ಗ್ರಂಥದಲ್ಲಿ ಸಂಗ್ರಹಗೊಂಡಿವೆ. ಅಲ್ಲಿ ಹರಡಿರುವ ನೂರಾರು ಉಪದೇಶದ ನುಡಿಗಳಲ್ಲಿ ಕೆಲವಾದರೂ ಓದುಗನ ಮನಸ್ಸನ್ನು ಸೆಳೆಯುತ್ತವೆ. ಸಂದಿಗ್ಧದ ಸಮಯದಲ್ಲಿ , ಇಕ್ಕಟ್ಟಿನ ಪರಿಸ್ಥಿತಿಯಲ್ಲಿ , ಧರ್ಮಸಂಕಟ ಎದುರಾಗುವ ಕ್ಷಣಗಳಲ್ಲಿ ಆ ಮಾತುಗಳೇ ದಾರಿದೀಪವಾಗಿ ಪರಿಣಮಿಸುತ್ತದೆ. ಈ ವಿಶೇಷತೆಯನ್ನು ಅರಿತವರು ಇನ್ನು ವಿರಮಿಸುವುದಿಲ್ಲ. ದಿನಕ್ಕೊಮ್ಮೆ ಕೆಲವು ಪುಟಗಳನ್ನಾದರೂ ಓದುವುದರಲ್ಲಿ ತೊಡಗುತ್ತಾರೆ. ಎಷ್ಟು ಬಾರಿ ಪುನರಾವರ್ತಿಸಿದರೂ, ಎಷ್ಟು ಬಗೆಯಲ್ಲಿ ಮರುಕಳಿಸಿದರೂ ಆ ಮಾತುಗಳು ನಿತ್ಯನೂತನವೆನಿಸುತ್ತವೆ. ಏಕೆಂದರೆ, ಅವು ಸಾಮಾನ್ಯ ವ್ಯಕ್ತಿಯೊಬ್ಬನ ಮಾತುಗಳಲ್ಲ ; ಪರಮಹಂಸರ ದಿವ್ಯವಾಣಿ!

ಶ್ರೀರಾಮಕೃಷ್ಣರ ಮಾತುಗಳಿಗೂ ಅವರ ಜೀವನಕ್ಕೂ ಬೇರ್ಪಡಿಸಲಾಗದಂಥ ಸಂಬಂಧವಿದೆ. ಸ್ವತಃ ತಾವು ಕಂಡು ಅನುಭವಿಸಿದ್ದನ್ನಲ್ಲದೆ ಅವರು ಬೇರೇನನ್ನೂ ಉಪದೇಶಿಸಲಿಲ್ಲ. ಲೌಕಿಕವಾಗಿ, ಆಧ್ಯಾತ್ಮಿಕವಾಗಿ ಪ್ರತಿಯೊಂದನ್ನೂ ಪರೀಕ್ಷಕ ದೃಷ್ಟಿಯಿಂದ ಗಮನಿಸಿದರೂ, ಶ್ರದ್ಧೆ-ವಿವೇಕ-ವೈರಾಗ್ಯಗಳಿಂದ ಪರಮಸತ್ಯದ ಅನುಭವ ಪಡೆದ ಬಳಿಕವೇ ಅವರು ಇತರರಿಗೆ ಉಪದೇಶಿಸಿದರು. ಆದ್ದರಿಂದ ಅವರ ಉಪದೇಶಗಳಲ್ಲಿ ಅನುಭವದ ಗಟ್ಟಿತನವಿದೆ. ಅವರ ಕೆಲವು ಆದರ್ಶಗಳನ್ನು ಅವರ ಮಾತುಗಳಿಂದಲೂ, ಅವರ ಜೀವನದಿಂದಲೂ ಗಮನಿಸಿ ನೋಡಬಹುದು.

### ಸರಳತೆ

ಹಲವು ಬಾರಿ ನೋಡುತ್ತೇವೆ, ಜಗತ್ತಿನಲ್ಲಿ ಪ್ರತಿಯೊಂದೂ ಎಷ್ಟೊಂದು ಕ್ಲಿಷ್ಟವಾಗಿವೆ! ಗೋಜಲು, ಗೊಂದಲ, ವಕ್ರತೆ-ಕೃತ್ರಿಮತೆಗಳಿಂದಾಗಿ ಜೀವನವೆಲ್ಲ ಜಟಿಲವಾಗುತ್ತದೆ. 'ಸರಳ, ನೇರ ವರ್ತನೆ ಹಾಗೂ ಚಿಂತನೆ ಯಾರಿಗಾದರೂ ಸಾಧ್ಯವೆ?' ಎಂದು ಪ್ರಶ್ನಿಸುವ ಪರಿಸ್ಥಿತಿ ಈಗಿನದು. ಮಾನವ ನಾಗರಿಕನಾದಷ್ಟೂ ಈ ಬಗೆಯ ಸಂಕೀರ್ಣತೆ ಹೆಚ್ಚುವುದೆ? ಆದರೆ 'ನಾಗರಿಕತೆ' ಎಂಬ

ಮಾನದಂಡವನ್ನೇ ಬದಲಾಯಿಸಿದಲ್ಲದೆ, ಇದನ್ನು ಅಲ್ಲಗಳೆಯಲಾಗದು. ಕಡಿಮೆ ಜನಸಂಖ್ಯೆಯ, ಹೆಚ್ಚು ಘರ್ಷಣೆಗಳಿಲ್ಲದ ಗ್ರಾಮೀಣ ಜನಜೀವನಕ್ಕೂ, ಬೃಹತ್ ನಗರಗಳ ಜೀವನಕ್ಕೂ ಇರುವ ವ್ಯತ್ಯಾಸವನ್ನು ಗಮನಿಸಿದಾಗ ಇದು ಸ್ಪಷ್ಟವಾಗುತ್ತದೆ. ಆದರೆ ಶ್ರೀರಾಮಕೃಷ್ಣರು ಬದುಕಿದ್ದುದು ಅಂಥ ನಗರದ ಹೃದಯಭಾಗದಲ್ಲಿ; ಅಂತಹ 'ನಾಗರಿಕ'ರ ಮಧ್ಯದಲ್ಲೇ! ಅವರ ಅನುಯಾಯಿಗಳೂ ಶಿಷ್ಯಂದಿರೂ ಅವರಲ್ಲಿ ಆದರ್ಶವಾಗಿ ಕಂಡಿರುವುದು ಈ 'ಸರಳತೆ'ಯನ್ನೇ.

''ಮನುಷ್ಯ ಸರಳನಾದಲ್ಲದೆ ಭಗವಂತನನ್ನು ಪಡೆಯಲಾರ.'' — ಇದು ಶ್ರೀರಾಮಕೃಷ್ಣರ ಮಾತು. ಎಲ್ಲ ಕಾಲಕ್ಕೂ ಆದರ್ಶವಾಗಿ ನಿಲ್ಲುವ, ಪ್ರತಿಯೊಬ್ಬ ಸಾಧಕನೂ ಪಾಲಿಸಬೇಕಾದ ಉಪದೇಶವಿದು. ಒಳಗೊಂದು-ಹೊರಗೊಂದು ಇಲ್ಲದ, ಎಲ್ಲವನ್ನೂ ನೇರವಾಗಿ ಗ್ರಹಿಸುವ, ಮಾತು-ಮನಸ್ಸು-ಕಾರ್ಯಗಳಲ್ಲಿ ಒಂದೇ ಆಗಿರುವ ನಡೆನುಡಿ ಅತ್ಯಂತ ಶ್ರೇಷ್ಠವಾದ ಆದರ್ಶ. ಕೇವಲ ಆಧ್ಯಾತ್ಮಿಕ ಸಾಧಕನಷ್ಟೇ ಅಲ್ಲ, ಪ್ರತಿಯೊಬ್ಬ ವ್ಯಕ್ತಿಯೂ ಸರಳತೆಯನ್ನು ರೂಢಿಸಿಕೊಳ್ಳುವುದು ಅತ್ಯಗತ್ಯ. ಇದರಿಂದ ಜೀವನ ಸಂಪನ್ನವಾಗುತ್ತದೆ, ಶಾಂತಿ, ಆನಂದಗಳು ಹೆಚ್ಚುತ್ತವೆ. ಸ್ವತಃ ಶ್ರೀರಾಮಕೃಷ್ಣರೇ ಸರಳತೆಯ ಮೂರ್ತರೂಪವಾಗಿದ್ದರು. ಅನ್ನಿಸಿದ್ದನ್ನು ನೇರವಾಗಿ ಹೇಳಿಬಿಡುತ್ತಿದ್ದರು. ಕರುಣೆ, ದಯೆ, ಮಾರ್ದವತೆ, ವಿನಯಶೀಲತೆಗಳು ಅವರಲ್ಲಿ ಮಡುಗಟ್ಟಿದ್ದರೂ ಕೂಡ, ತಮಗೆ ಸರಿಯಿಲ್ಲವೆಂದು ಕಂಡುಬಂದರೆ-ಅದು ಯಾರೇ ಆಗಿರಲಿ-ಅವರ ಮುಖದ ಮೇಲೆ ಹೇಳಿಬಿಡುತ್ತಿದ್ದರು. ಈ ರೀತಿ ಅವರು ಕೇಶವಚಂದ್ರ ಸೇನ, ಈಶ್ವರಚಂದ್ರ ವಿದ್ಯಾಸಾಗರ, ದೇವೇಂದ್ರನಾಥ ಠಾಕೂರ್-ಇವರಿಗೂ ಹೇಳಿಬಿಟ್ಟಿದ್ದರು. ಅವರಾದರೋ, ಆ ಕಾಲದ ಪ್ರಸಿದ್ಧ ಹಾಗೂ ಪ್ರಭಾವಶಾಲಿ ವ್ಯಕ್ತಿಗಳು. ಹಾಗೆಂದು ಶ್ರೀರಾಮಕೃಷ್ಣರಿಗೆ ಅವರ ಮೇಲೆ ತಿರಸ್ಕಾರವಿತ್ತು ಎಂದು ಅರ್ಥವಲ್ಲ; ಎಲ್ಲರ ಮೇಲಿರುವಂತೆ ಸ್ನೇಹ, ಸಲಿಗೆ, ಆದರ ಅವರ ಮೇಲೂ ಇತ್ತು. ಆದರೆ, ಅವರೆಂದೂ ಮನಸ್ಸಿನ ಒಳಗೆ ಒಂದನ್ನಿಟ್ಟುಕೊಂಡು ಹೊರಗೆ ಪ್ರೀತಿ-ಆದರ ತೋರಿಸುವವರಾಗಿರಲಿಲ್ಲ. ಈ ರೀತಿಯ ಸರಳ, ನೇರ ನಡೆ ನುಡಿ ಅವರಲ್ಲಿ ಸಹಜವಾಗಿತ್ತು.

ಪ್ರಪಂಚದಲ್ಲಿ ವ್ಯವಹರಿಸುವಾಗಲೂ, ದಿವ್ಯಭಾವದಲ್ಲಿದ್ದಾಗಲೂ ಶ್ರೀರಾಮಕೃಷ್ಣರು ಈ ಸರಳ ಮನೋಭಾವವನ್ನು ತೊರೆಯಲಿಲ್ಲ. ಅವರ ಪಾಲಿಗೆ ಇಹ-ಪರ ಎಂಬ ಭೇದವೇ ಇರಲಿಲ್ಲ. ಎಲ್ಲೆಲ್ಲೂ ಜಗನ್ಮಾತೆಯ ಲೀಲೆಯನ್ನೇ ಕಂಡವರಿಗೆ ಎಲ್ಲ ವ್ಯವಹಾರಗಳೂ ಸುಸ್ಪಷ್ಟ, ಅತ್ಯಂತ ಸರಳ. ಈ ಬಗೆಯ ವರ್ತನೆಯನ್ನೇ ಅವರು ಎಲ್ಲರಿಗೂ ಬೋಧಿಸುತ್ತಾರೆ.

### ಸಹಿಷ್ಣುತೆ

ಆದರೆ ಅಂಥ ಸರಳತೆಯನ್ನು ರೂಢಿಸಿಕೊಂಡರೆ ಪ್ರಪಂಚದಲ್ಲಿ ಬದುಕುವುದು ಹೇಗೆ? ಸಾಕಷ್ಟು ಮೋಸ, ವಂಚನೆ, ವಕ್ರತೆ, ಕ್ರೌರ್ಯಗಳನ್ನು ನಾವು ಜಗತ್ತಿನಲ್ಲಿ ಕಾಣುತ್ತೇವೆ. ಸರಳ ಸ್ವಭಾವದವರನ್ನು ಎಲ್ಲರೂ ಬಲಿಹಾಕುತ್ತಾರೆ. ಆದ್ದರಿಂದ ಈ ಜಗತ್ತಿನಲ್ಲಿ ಯಾರಿಗೂ ಸರಳವಾಗಿ ಬದುಕುವುದು ಸಾಧ್ಯವಿಲ್ಲ; 'ಸರಳತೆ' ಯೆಂಬುದು ಕೇವಲ ಆದರ್ಶದ ಮಾತಷ್ಟೇ ಎಂಬುದಾಗಿ ಕೆಲವರ ವಾದ. ಸ್ವಲ್ಪಮಟ್ಟಿಗೆ ಈ ಮಾತನ್ನು ಒಪ್ಪಬೇಕಾಗುತ್ತದೆ, ನಿಜ. ಆದರೆ ಸರಳ ಜೀವನ ಸಾಧ್ಯವೇ ಇಲ್ಲ ಎಂಬುದು ಸರಿಯಲ್ಲ. 'ಮನಸ್ಸಿದ್ದಲ್ಲಿ ಮಾರ್ಗವಿದೆ' ಎಂಬಂತೆ, ನಮಗೆ ನಿಜವಾಗಿಯೂ ಅಂತಹ ಜೀವನ ಬೇಕಾಗಿದ್ದರೆ ಅದನ್ನು ರೂಢಿಸಿಕೊಳ್ಳುವುದು ಸಾಧ್ಯವಿದ್ದೇ ಇದೆ. ಆದರೆ ಇದಕ್ಕೆ ಅಗತ್ಯವಾಗಿ ಬೇಕಾಗಿರುವ ಇನ್ನೊಂದು ಗುಣವೇ, 'ಸಹಿಷ್ಣುತೆ'.

ಇಂದಿನ ಜೀವನದಲ್ಲಿ ಮರೆಯಾಗುತ್ತಿರುವ, ಅಥವಾ ಅನೇಕರು ಕಳೆದುಕೊಳ್ಳುತ್ತಿರುವ ಒಂದು ವಿಶೇಷ ಗುಣವಿದು. ಕಷ್ಟಪಟ್ಟು ದುಡಿಯಲು, ದೀರ್ಘಕಾಲ ಶ್ರಮವಹಿಸಿ ಕೆಲಸ ಮಾಡಲು, ಹಾಗೂ ಕಷ್ಟ-ಸಂಕಟಗಳು ಎದುರಾದಾಗ ಅದನ್ನು ಸಹಿಸಿಕೊಳ್ಳಲು ವಿಶಿಷ್ಟ ಬಗೆಯ ಮನೋಭಾವ ಅಗತ್ಯವಿದೆ. ಇದನ್ನು 'ಸಹಿಷ್ಣುತೆ' ಎಂದು ಕರೆಯಲಾಗುತ್ತದೆ. ಇಂದಿನ ಜೀವನದಲ್ಲಿ ಎಲ್ಲವೂ ಕ್ಷಣಾರ್ಧದಲ್ಲಿ ನಡೆಯಬೇಕು. ಸಹನೆ, ತಾಳ್ಮೆ, ಕಾಯುವಿಕೆ ಎಂದರೆ ಯಾರಿಗೂ ಹಿಡಿಸದು, ಇದರರ್ಥ, ಇದು ಇಂದಿನ ಜೀವನಕ್ಕೆ ಒಗ್ಗದ ಒಂದು ಗುಣವೆಂದಾಗಲೀ, ಇಂದಿನ ಜನರಿಗೆ ಇದನ್ನು ರೂಢಿಸಿಕೊಳ್ಳುವುದು ಸಾಧ್ಯವಿಲ್ಲ ಎಂದಾಗಲೀ ಅಲ್ಲ. ಅಷ್ಟೊಂದು ಸಹನೆ ಇಲ್ಲದಿದ್ದರೆ ಮಾನವನು ಎಂದಿಗೂ ಮಹತ್ತರ ಸಾಧನೆಗಳನ್ನು ಮಾಡಲು ಸಾಧ್ಯವಿರುತ್ತಿರಲಿಲ್ಲ. ಹತ್ತಾರು ಬಾರಿ ಸೋತು ಮುಗ್ಗರಿಸದೆ, ಯಾವ ವಿಜ್ಞಾನಿಯೂ ಹೊಸತನ್ನು ಕಂಡುಹಿಡಿಯಲು ಸಾಧ್ಯವಾಗುತ್ತಿರಲಿಲ್ಲ. ಅನಂತ ಸಹನೆ, ತಾಳ್ಮೆ ಇವನ್ನು ಪ್ರತಿಯೊಬ್ಬರೂ ರೂಢಿಸಿಕೊಳ್ಳಬೇಕು.

ಶ್ರೀರಾಮಕೃಷ್ಣರಿಗೆ ಸೇವೆ ಮಾಡುತ್ತಿದ್ದ ಹೃದಯ ಕೊನೆಕೊನೆಗೆ ಅವರಿಗೆ ಇನ್ನಿಲ್ಲದಷ್ಟು ಹಿಂಸೆ ಕೊಡುತ್ತಿದ್ದ. ಒಂದೊಂದು ಬಾರಿ ಅವನ ಹಿಂಸೆ ತಡೆಯಲಾಗದೆ ಹೋದಾಗ ಶ್ರೀರಾಮಕೃಷ್ಣರು ಹೇಳುತ್ತಿದ್ದರು, ''ನನ್ನನ್ನು ನೀನು ಸಹಿಸಿಕೊಳ್ಳಬೇಕು, ನಿನ್ನನ್ನು ನಾನು ಸಹಿಸಿಕೊಳ್ಳಬೇಕು. ಇಲ್ಲದಿದ್ದರೆ ಗಾಡಿ ಮುಂದೆ ಸಾಗುವ ಬಗೆ ಹೇಗೆ?''

ಕುಟುಂಬ ಕಲಹ, ಜಾತಿ ಕಲಹ, ಮತಧರ್ಮಗಳ ನಡುವಿನ ಸಂಘರ್ಷ, ರಾಜಕೀಯ-ಸಾಮಾಜಿಕ ಬಿಕ್ಕಟ್ಟುಗಳಿಂದ ಮಾನವ ಜನಾಂಗ ತತ್ತರಿಸುತ್ತಿದೆ. ಸಾಮಾನ್ಯ ಜನಜೀವನದಲ್ಲಿ ಸಾಮರಸ್ಯ, ಸಹಬಾಳ್ವೆಗಳು ಇಲ್ಲದಾಗುತ್ತಿವೆ. ಪ್ರತಿದಿನ ಬೆಳಿಗ್ಗೆ ಒಂದಲ್ಲ ಒಂದು ಬಗೆಯ ದುರಂತಗಳ ಬಗ್ಗೆ ಕೇಳುತ್ತೇವೆ. ಸಹಿಷ್ಣುತೆಯ ಬಗ್ಗೆ ಸಾಕಷ್ಟು ಭಾಷಣಗಳನ್ನು ಮಾಡುತ್ತಾರೆ, ಲೇಖನ ಬರೆಯುತ್ತಾರೆ. ಆದರೆ ಪಾಲಿಸುವವರು ಯಾರು? ಎಲ್ಲರ ಮನೆಯ ದೋಸೆಯೂ ತೂತೇ. ಇಂತಹ ಪರಿಸ್ಥಿತಿಯಲ್ಲಿ ಶ್ರೀರಾಮಕೃಷ್ಣರ ಸಹಿಷ್ಣುತೆಯ ಉಪದೇಶ ಅತ್ಯಂತ ಪ್ರಸ್ತುತವಾಗಿ ಕಂಡುಬರುತ್ತದೆ. ತುಸು ಕಾಯೋಣ. ಆವೇಗ, ಕೋಪ, ಅಸಹನೆ ಕ್ರಮೇಣ ಶಾಂತವಾಗಲಿ. ಇಬ್ಬರ ನಡುವೆ ಪ್ರೀತಿ, ಆದರ ಮೂಡಿ

ಬರಲಿ. ಇಂತಹ ಮನೋಭಾವವನ್ನು ಒಟ್ಟು ಸಮಾಜವೇ ರೂಢಿಸಿಕೊಳ್ಳುವಂತಾಗಬೇಕು. ಪ್ರಾಥಮಿಕ ಶಿಕ್ಷಣದ ಹಂತದಿಂದಲೂ ಸಹಿಷ್ಣುತೆಯನ್ನು ಪಾಲಿಸಲು ಕಲಿಸಬೇಕು. ಸಮಾಜದಲ್ಲಿ ಎಲ್ಲೆಡೆ ಇದನ್ನು ರೂಢಿಸಿಕೊಳ್ಳುವುದು ಬಹುದೊಡ್ಡ ಕಾರ್ಯ ನಿಜ; ಆದರೆ ವೈಯಕ್ತಿಕವಾಗಿ ಒಬ್ಬೊಬ್ಬರು ಕೂಡ ಇದನ್ನು ಬದುಕಿನಲ್ಲಿ ಅಳವಡಿಸಲು ಪ್ರಯತ್ನಿಸಬಹುದು.

### ಭಾವತೀವ್ರತೆ

ಶ್ರೀರಾಮಕೃಷ್ಣರ ಜೀವನದುದ್ದಕ್ಕೂ ಭಾವತೀವ್ರತೆಯನ್ನು ನಾವು ಕಾಣುತ್ತೇವೆ. ಅವರಲ್ಲಿ ಎಲ್ಲವೂ ತೀವ್ರವಾಗಿದ್ದವು. ತೀವ್ರ ವೈರಾಗ್ಯ, ಅತ್ಯದ್ಭುತ ತ್ಯಾಗ, ಅದ್ವಿತೀಯ ಭಕ್ತಿ-ಭಾವ, ಹಿಮಾಲಯ ಶಿಖರದಂತಹ ಜ್ಞಾನಪಾರಮ್ಯ.... ಎಲ್ಲೆಡೆ ಅವರು ತೀವ್ರತರವಾದ ಭಾವವನ್ನು ಹೊಂದಿದ್ದರು. ಅವರು ಇತರರಿಗೆ ಉಪದೇಶಿಸುವಾಗಲೂ ಹಾಗೆಯೇ. ‘ಮುಳುಗು ಮುಳುಗು ಮನವೇ, ಹಿರಿಯೊಲವಿನ ಕಡಲಾಳಕೆ.....’ ಎಂದು ಅವರು ಹಾಡುತ್ತ ಹೇಳುತ್ತಿದ್ದರು, ‘‘ಮೇಲೆ ಮೇಲೆ ತೇಲಿದರೆ ಆಗದು. ಆಳಕ್ಕೆ ಮುಳುಗಬೇಕು.’’

ಇಂದಿನ ಜೀವನದಲ್ಲಿ ಎಲ್ಲವೂ ಲಘುವಾಗಿ ಬಿಟ್ಟಿದೆ. ವಿಸ್ತಾರ ಜ್ಞಾನ, ಆಳವಾದ ಅರಿವು – ಇವೆಲ್ಲ ಹಿಂದಿನ ಆದರ್ಶವೆಂದೇ ಭಾವಿಸಲಾಗುತ್ತಿದೆ. ಆದರೆ ಜ್ಞಾನವೆಂಬುದು ಎಲ್ಲ ಕಾಲಕ್ಕೂ ಒಂದೇ ರೀತಿ. ಜ್ಞಾನಶಾಖೆಗಳು ಸಾವಿರ ಬಗೆ ಇರಬಹುದು. ಆದರೆ ‘ಜ್ಞಾನ’ ಒಂದೇ. ಕೇವಲ ಜ್ಞಾನ ಮಾತ್ರವಲ್ಲ , ಒಟ್ಟು ಬದುಕೇ ತೀವ್ರತರವಾಗಿ, ಆಳವಾದ ಅರಿವು-ಭಾವನೆಗಳಿಂದ ಸಂಪದ್ಭರಿತವಾಗಿರಬೇಕು. ಆಗ ಮಾತ್ರ ಏನನ್ನಾದರೂ ಸಾಧಿಸಲು ಸಾಧ್ಯವಾಗುತ್ತದೆ. ಜೀವನಕ್ಕೆ ಅರ್ಥ ಬರುತ್ತದೆ.

### ಸತ್ಯನಿಷ್ಠೆ

‘‘ಕಲಿಯುಗದಲ್ಲಿ ಸತ್ಯವಚನವೇ ತಪಸ್ಸು’’ ಎನ್ನುತ್ತಾರೆ ಶ್ರೀರಾಮಕೃಷ್ಣರು. ಕೇವಲ ವಚನ ಮಾತ್ರವಲ್ಲ , ಆಲೋಚನೆ, ಕಾರ್ಯಗಳೂ ಸತ್ಯಕ್ಕೆ ಅನುಗುಣವಾಗಿರಬೇಕು. ಅಂತಹ ಕಠಿಣ ಸತ್ಯಪರಿಪಾಲನೆಯಿಂದ ಎಲ್ಲ ಆಧ್ಯಾತ್ಮಿಕ ಗುಣಗಳೂ ಜೊತೆ ಜೊತೆಗೇ ಬರುತ್ತವೆ; ಭಗವಂತನ ಸಾಕ್ಷಾತ್ಕಾರವೂ ಲಭಿಸುತ್ತದೆ. ಇದಕ್ಕೆ ಆಧಾರವಾಗಿರುವ ತತ್ತ್ವವೆಂದರೆ – ಭಗವಂತ ಬೇರೆಯಲ್ಲ, ಸತ್ಯ ಬೇರೆಯಲ್ಲ ಎಂಬುದು. ವೇದ-ಉಪನಿಷತ್ತುಗಳಲ್ಲಿ ಹೇಳಿರುವಂತೆ, ಎಲ್ಲ ಅಸ್ತಿತ್ವಕ್ಕೆ ಆಧಾರವಾಗಿರುವ ಬ್ರಹ್ಮವಸ್ತುವು ಋತ, ಸತ್ಯಗಳ ರೂಪದಲ್ಲಿ ಗೋಚರವಾಗುತ್ತದೆ. ಅನಂತವೂ, ಏಕವೂ, ನಿತ್ಯವು ಆಗಿರುವ ಆ ಪರಮಸತ್ಯವು ಮಾನವ ಜೀವನದಲ್ಲಿ ವ್ಯಕ್ತಗೊಳ್ಳುವುದು ಸತ್ಯವೆಂಬ ಆದರ್ಶವಾಗಿ. ಆಚರಣೆಯಲ್ಲಿ ಅದು ಪ್ರಾಮಾಣಿಕತೆ, ಶ್ರದ್ಧೆ, ತಪಸ್ಸುಗಳ ಮೂಲಕ ಹೊರಹೊಮ್ಮಿ, ಅಂತರ್ಯದಲ್ಲಿ ಅಡಗಿರುವ ತನ್ನ ನೈಜಸ್ವರೂಪವನ್ನು ತೋರಿಸಿಕೊಡುವುದು. ಇದನ್ನು ನಾವು ಶ್ರೀ ರಾಮಕೃಷ್ಣರ ಜೀವನದ ಹಲವು ಘಟನೆಗಳ ಮೂಲಕ ಕಂಡುಕೊಳ್ಳಬಹುದು.

ಶ್ರೀರಾಮಕೃಷ್ಣರು ಒಂದು ಘಟನೆಯನ್ನು ಹೀಗೆ ವಿವರಿಸುತ್ತಾರೆ:

‘‘ನನಗೆ ಭಗವತಿಯ ದರ್ಶನ ದೊರೆತನಂತರ ಕೈಯಲ್ಲಿ ಹೂವನ್ನು ತೆಗೆದುಕೊಂಡು ಪ್ರಾರ್ಥನೆ ಮಾಡಿದೆ: ‘ಹೇ ಭಗವತಿ, ಇಗೋ ತೆಗೆದುಕೋ ನಿನ್ನ ಜ್ಞಾನವನ್ನು, ಇಗೋ ತೆಗೆದುಕೋ ನಿನ್ನ ಅಜ್ಞಾನವನ್ನು. ನನಗೆ ಶುದ್ಧ ಭಕ್ತಿಯನ್ನು ಕೊಡು ತಾಯೆ. ಇಗೋ ತೆಗೆದುಕೋ ನಿನ್ನ ಶುಚಿಯನ್ನು, ಇಗೋ ತೆಗೆದುಕೋ ನಿನ್ನ ಅಶುಚಿಯನ್ನು, ನನಗೆ ಶುದ್ಧ ಭಕ್ತಿಯನ್ನು ಕರುಣಿಸು ತಾಯೆ. ಇಗೋ ತೆಗೆದುಕೋ ನಿನ್ನ ಕೆಟ್ಟದ್ದನ್ನು, ಇಗೋ ತೆಗೆದುಕೋ ನಿನ್ನ ಒಳ್ಳೆಯದನ್ನು, ನನಗೆ ಶುದ್ಧ ಭಕ್ತಿಯನ್ನು ನೀಡು ತಾಯೆ. ಇಗೋ ತೆಗೆದುಕೋ ನಿನ್ನ ಪುಣ್ಯವನ್ನು, ಇಗೋ ತೆಗೆದುಕೋ ನಿನ್ನ ಪಾಪವನ್ನು, ನನಗೆ ಶುದ್ಧ ಭಕ್ತಿಯನ್ನು ಕರುಣಿಸು ತಾಯೆ.’ ಇವುಗಳನ್ನೆಲ್ಲಾ ತೆಗೆದುಕೋ ಅಂತಲೇನೋ ಹೇಳಿದೆ, ಆದರೆ ಆಗ, ‘ಹೇ ತಾಯೆ, ಇಗೋ ತೆಗೆದುಕೋ ನಿನ್ನ ಸತ್ಯವನ್ನು, ಇಗೋ ತೆಗೆದುಕೋ ನಿನ್ನ ಅಸತ್ಯವನ್ನು’ ಎಂದು ಹೇಳಲಾಗಲಿಲ್ಲ. ಭಗವತಿಯ ಪಾದಪದ್ಮಗಳಲ್ಲಿ ಎಲ್ಲವನ್ನೂ ಅರ್ಪಿಸಿಬಿಟ್ಟೆ. ಆದರೆ ಸತ್ಯವೊಂದನ್ನು ಮಾತ್ರ ಅರ್ಪಿಸಲಾಗಲಿಲ್ಲ.’’

ಸತ್ಯವನ್ನೂ ಅರ್ಪಿಸಿಬಿಟ್ಟರೆ, ತಾನು ಇದುವರೆಗೆ ಹೇಳಿದ ಮಾತೂ ಸುಳ್ಳಾಗದೆ? ಅಥವಾ, ಎಲ್ಲಕ್ಕೂ ಮೂಲಾಧಾರವಾದ ಸತ್ಯವನ್ನು ಅರ್ಪಿಸಿದರೆ ಇನ್ನು ಉಳಿದಿರುವುದಾದರೂ ಏನು? ಇದು ಶ್ರೀರಾಮಕೃಷ್ಣರ ಮಾತುಗಳ ಅಂತರಾರ್ಥ.

ನಮ್ಮ ಬದುಕಿನಲ್ಲಿ ಈ ಆದರ್ಶಗಳನ್ನು ಪಾಲಿಸುವುದು ಕಷ್ಟವೇನಲ್ಲ. ದೈನಂದಿನ ಕೆಲಸ, ಚಟುವಟಿಕೆ, ವ್ಯವಹಾರಗಳು ಇದ್ದೇ ಇರುತ್ತವೆ. ಜೀವನ ನಡೆಸಲು ಎಲ್ಲರೂ ಕೆಲಸ ಮಾಡಲೇಬೇಕು. ಆದರೆ, ಬಿಡುವಾದಾಗ ಶ್ರೀರಾಮಕೃಷ್ಣರ ಉಪದೇಶಗಳನ್ನು ಓದಬೇಕು. ನಮಗೆ ಮುಖ್ಯವೆನಿಸಿದ ಅವರ ಮಾತುಗಳನ್ನು ಗುರುತುಹಾಕಿಕೊಳ್ಳಬೇಕು. (ಒಂದು ನೋಟ್‌ಬುಕ್ ಜೊತೆಗಿರಲಿ. ಇತ್ತೀಚೆಗೆ, ಮೊಬೈಲ್‌ನಲ್ಲೂ ‘ನೋಟ್ಸ್’ ಅಥವಾ ನೋಟ್‌ಬುಕ್ ಆ್ಯಪ್ ದೊರೆಯುತ್ತವೆ. ಅದಾದರೂ ಪರವಾಗಿಲ್ಲ. ಮುಖ್ಯವಾದದ್ದು: ನಮ್ಮ ಹೃದಯದಲ್ಲಿ ಒಂದು ನೋಟ್‌ಬುಕ್ ತೆರೆಯಬೇಕು!) ಬಳಿಕ ನಮ್ಮ ಮನಸ್ಸಿನಲ್ಲಿ ಬಿಡುವು ಮಾಡಿಕೊಂಡು ಈ ಉಪದೇಶದ ಮಾತುಗಳನ್ನು ಪದೇ ಪದೇ ನೆನೆಯುತ್ತಿರಬೇಕು. ಅವು ನಮ್ಮನ್ನು ಕಾಪಾಡುತ್ತವೆ. ಕೆಲಸದ ನಡುವೆ ನಮಗೆ ದಾರಿ ತೋರುತ್ತವೆ. ಕೆಲಸ-ಚಟುವಟಿಕೆಗಳೂ ಭಗವಂತನ ಕಾರ್ಯವಾಗುವಂತೆ ಮಾಡುತ್ತವೆ. ❖

### ಆಗಸ್ಟ್ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೧೨ | ಶನಿವಾರ | ಏಕಾದಶಿ |
| ೨೭ | ಭಾನುವಾರ | ಏಕಾದಶಿ |
| ೩೧ | ಗುರುವಾರ | ಸ್ವಾಮಿ ನಿರಂಜನಾನಂದ ಜಯಂತಿ |